**NOVEMBER 01, 2024**

**AKASHAVANI - DHARWAD**

**PRADESH SAMACHARA (KANNADA) 07.05 A.M.**

<><><>

ಆಕಾಶವಾಣಿ

ಪ್ರದೇಶ ಸಮಾಚಾರ

ಓದಿದವರು: ಹರ್ಷವರ್ಧನ ಶೀಲವಂತ

<><><>

ಆಕಾಶವಾಣಿಯ ಆತ್ಮೀಯ ಕೇಳುಗರಿಗೆಲ್ಲ.. ದೀಪಾವಳಿ ಹಾಗೂ ಸುವರ್ಣ ಕರ್ನಾಟಕ ರಾಜ್ಯೋತ್ಸವದ, ಹಾರ್ದಿಕ ಶುಭಾಶಯಗಳು.

<><><>

ಮುಖ್ಯಾಂಶಗಳು:

<><><>

- 'ಹೆಸರಾಯಿತು ಕರ್ನಾಟಕ; ಉಸಿರಾಗಲಿ ಕನ್ನಡ' ಧ್ಯೇಯದೊಂದಿಗೆ, ಇಂದು ಸಂಭ್ರಮದ, ಕನ್ನಡ ನಾಡ ಹಬ್ಬ.
- ದೀಪಾವಳಿ ಲಕ್ಷ್ಮೀ ಪೂಜೆ ಹಾಗೂ ಬಲಿ ಪಾಡ್ಯಮಿ ಹಿನ್ನೆಲೆ, ನಾಡಿನಾದ್ಯಂತ ಶ್ರದ್ಧಾ, ಭಕ್ತಿಯಿಂದ, ಹಬ್ಬದಾಚರಣೆ.
- ಸಂಪೂರ್ಣತಾ ಅಭಿಯಾನ; ಬೀದರ ಜಿಲ್ಲೆಯ ನಾಲ್ಕು ಮಹತ್ವಾಕಾಂಕ್ಷಿ ತಾಲೂಕುಗಳಲ್ಲಿ, ಯಶಸ್ವಿ.
- ಕಲಬುರಗಿಯ ಧಾರ್ಮಿಕ, ಐತಿಹಾಸಿಕ ಹಾಗೂ ಪ್ರವಾಸಿ ತಾಣಗಳ, ಮೂಲಸೌಕರ್ಯ ಅಭಿವೃದ್ಧಿಗೆ ಕ್ರಮ – ಪ್ರಿಯಾಂಕ್ ಖರ್ಗೆ.

<><><>

ಈಗ ವಾರ್ತೆಗಳ ವಿವರ

<><><>

ಇಂದು, ನವೆಂಬರ್ 1. ಕನ್ನಡ ರಾಜ್ಯೋತ್ಸವದ 69ನೇ ಹಾಗೂ ಕರ್ನಾಟಕ ನಾಮಕರಣದ ಸುವರ್ಣ ಸಂಭ್ರಮ. ಕರ್ನಾಟಕ ಆರಂಭದಲ್ಲಿ ಮೈಸೂರು ಪ್ರಾಂತದ ಭಾಗವಾಗಿತ್ತು. 1950 ರಲ್ಲಿ ಭಾರತ ಗಣರಾಜ್ಯವಾದ ಮೇಲೆ, ಭಾಷೆ ಆಧಾರದ ಮೇಲೆ ರಾಜ್ಯಗಳು ರೂಪುಗೊಂಡವು. ಕನ್ನಡಿಗರ ಮೈಸೂರು ರಾಜ್ಯವು, 1956ರ ನವೆಂಬರ್ 1 ರಂದು ಉದಯವಾಯಿತು. ಮೈಸೂರು ಸಂಸ್ಥಾನ, ಮುಂಬಯಿ

ಕರ್ನಾಟಕ, ಹೈದರಾಬಾದ್ ಕರ್ನಾಟಕ ಹಾಗೂ ಮದ್ರಾಸ್ ಕರ್ನಾಟಕ ಹೀಗೆ, ನಾಲ್ಕು ವಿಭಾಗವಾಗಿದ್ದ ಅಂದಿನ ಪ್ರಾಂತ್ಯಗಳು ನವೆಂಬರ್ 1 ರಂದು ಅಧಿಕೃತವಾಗಿ ಒಂದಾದವು.

<><><>

ಮುಖ್ಯಮಂತ್ರಿ, ರಾಜ್ಯಪಾಲರು ಹಾಗೂ ನಾಡಿನ ಗಣ್ಯರು, ರಾಜ್ಯೋತ್ಸವದ ಶುಭಾಶಯ ಕೋರಿದ್ದಾರೆ.

<><><>

ಧಾರವಾಡದ ಗಂಡು ಮಕ್ಕಳ ಟ್ರೇನಿಂಗ್ ಕಾಲೇಜಿನ ಪ್ರಾಚಾರ್ಯರಾಗಿದ್ದ, ಡೆಪ್ಯೂಟಿ ಚೆನ್ನಬಸಪ್ಪನವರು, ಕನ್ನಡ ಶಿಕ್ಷಕರಿಗೆ ಬೋಧನಾ ಮಾರ್ಗದರ್ಶನಕ್ಕಾಗಿ, 1865 ಏಪ್ರಿಲ್ ತಿಂಗಳಲ್ಲಿ ಆರಂಭಿಸಿದ, 'ಮಠ ಪತ್ರಿಕೆ'ಯ ಮೊದಲ ಸಂಚಿಕೆಯ ಸಂಪಾದಕೀಯದಲ್ಲಿ 'ಕರ್ನಾಟಕ' ಪದ ಪ್ರಯೋಗ ಮಾಡಿದರು. ಇಂದಿಗೆ 'ಜೀವನ ಶಿಕ್ಷಣ' ಹೆಸರಿನಲ್ಲಿ ಈ ಪತ್ರಿಕೆ ಪ್ರಕಟಗೊಳ್ಳುತ್ತಿದೆ. ಪ್ರದೇಶ ಸಮಾಚಾರಕ್ಕಾಗಿ ಹೆಚ್ಚಿನ ಮಾಹಿತಿ ನೀಡಿದ್ದಾರೆ, ಪತ್ರಿಕೆಯ ವಿಶ್ರಾಂತ ಸಂಪಾದಕ, ಅಮ್ಮಿನಬಾವಿಯ ಗುರುಮೂರ್ತಿ ಯರಗಂಬಳಿಮಠ.

<><><>

ಗುರುಮೂರ್ತಿ ಯರಗಂಬಳಿಮಠ 40 ಧ್ವನಿ

<><><>

ಅಜ್ಞಾನದ ಕತ್ತಲನ್ನು ದೂರ ಮಾಡಿ, ಜ್ಞಾನದ ಬೆಳಕನ್ನು ಬೀರುವುದೇ ದೀಪಾವಳಿ ಹಬ್ಬದಾಚರಣೆಯ ಸತ್ಯಾರ್ಥ. ದೀಪಾವಳಿ ಭಾರತೀಯರ ಬಹು ದೊಡ್ಡ ಹಬ್ಬ. ದೀಪ ಎಂದರೆ ಪ್ರಕಾಶ, 'ಅವಳಿ' ಎಂದರೆ ಮಾಲೆ, ಸಾಲು ಎಂದರ್ಥ. ದೀಪಾವಳಿ, ದೀಪಗಳ ಸಾಲಿನಂತೆ ಹಬ್ಬಗಳ ಸಾಲೂ ಹೌದು. ಪ್ರತಿ ಮನೆ–ಮನೆಯಲ್ಲೂ, ಪ್ರತಿಯೊಬ್ಬರ ಮನದಲ್ಲೂ, ಜ್ಞಾನದ ದೀಪ ನಿರಂತರವಾಗಿ ಬೆಳಗಲಿ ಎಂಬುದೇ, ದೀಪಾವಳಿ ಹಬ್ಬದ, ಸಂದೇಶ.

<><><>

ಅಶ್ವಿಜ ಬಹುಳ ದ್ವಾದಶಿಯಿಂದ ಪ್ರಾರಂಭವಾಗುವ ದೀಪಾವಳಿ ಹಬ್ಬ, ಇಂದು ಲಕ್ಷ್ಮೀ ಪೂಜೆ ಹಾಗೂ ನಾಳೆಯ ಕಾರ್ತಿಕ ಶುದ್ಧ ಬಲಿ ಪಾಡ್ಯಮಿಯ ವರೆಗೂ ಆಚರಿಸಲ್ಪಡುತ್ತದೆ. ಭಾದ್ರಪದ ಕೃಷ್ಣ ಅಮಾವಾಸ್ಯೆಯ ರಾತ್ರಿಯಿಂದ ಪ್ರಾರಂಭವಾಗಿ, ಕಾರ್ತಿಕ ಮಾಸ ಮುಗಿಯುವ ವರೆಗೂ, ದೀಪಾರಾಧನೆ, ದೀಪದಾನ ಮಾಡುವುದು, ಭಾರತೀಯ ಪರಂಪರೆ. ನೀರು ತುಂಬುವ ಹಬ್ಬದಿಂದ ಆರಂಭವಾಗಿ, ನರಕ ಚತುರ್ದಶಿ, ಅಮಾವಾಸ್ಯೆ, ಬಲಿಪಾಡ್ಯಮಿ, ಭಾವನಬಿದಿಗೆ, ಅಕ್ಕನ ತದಿಗೆ, ಪಂಚಮಿಯ ವರೆಗೆ ಪ್ರತಿದಿನವೂ ಹಬ್ಬವೇ.

<><><>

ಗಣ್ಯರು, ಸಾಂಸ್ಕೃತಿಕ ರಾಯಬಾರಿಗಳು, ಜನಪ್ರತಿನಿಧಿಗಳು, ನಾಡಿನ ಜನತೆಗೆ ದೀಪಾವಳಿ ಹಾಗೂ ಬಲಿ ಪಾಡ್ಯಮಿಯ ಹಾರ್ದಿಕ ಶುಭಾಶಯ ಕೋರಿದ್ದಾರೆ.

<><><>

ವಿಭಿನ್ನ ಸಂಸ್ಕೃತಿ, ಆಚರಣೆಯ, ಗಡಿ ಜಿಲ್ಲೆ ಬೆಳಗಾವಿಯಲ್ಲಿ, ಬೆಳಕಿನ ಹಬ್ಬ ದೀಪಾವಳಿಯ ಸಂಭ್ರಮ, ವಿಶೇಷ ಕಳೆ ತಂದಿದೆ. ಹಣತೆ, ಹೂವು, ಹಣ್ಣು, ಕಾಯಿ, ಆಕಾಶಬುಟ್ಟಿ ಮನೆಗಳ ಮುಂದೆ ಅಲಂಕರಿಸಿ, ರಂಗೋಲಿ ಬಿಡಿಸಿ, ಪೂಜೆ ನೆರವೇರಿಸಿ, ಹಬ್ಬದಾಚರಣೆಯ ಸಂಭ್ರಮದಲ್ಲಿ ತೊಡಗಿದ್ದಾರೆ. ವೈವಿಧ್ಯಮಯ ಆಕಾಶಬುಟ್ಟಿಗಳು, ಪ್ರತಿ ಮನೆಯ ಎದುರು, ಸಂಜೆಯಾದಂತೆ ಬೆಳಕಿನ ಚಿತ್ತಾರ ಮೂಡಿಸುತ್ತಿವೆ.

<><><>

ಮಕ್ಕಳು, ಸಾರ್ವಜನಿಕ ಸ್ಥಳಗಳಲ್ಲಿ, ಮಣ್ಣಿನಿಂದ ಬೃಹತ್ ಗಾತ್ರದ ಕೋಟೆಗಳ ಆಕೃತಿಗಳನ್ನು ನಿರ್ಮಿಸಿ, ಅವುಗಳಲ್ಲಿ ಸೈನಿಕರು, ಅರಮನೆ, ಉದ್ಯಾನವನ ರಚಿಸಿ, ಛತ್ರಪತಿ ಶಿವಾಜಿ ಮಹಾರಾಜರ ವಿಜಯಗಾಥೆಯ, ಐತಿಹಾಸಿಕ ಸ್ಪರ್ಷ ನೀಡಿರುವುದು, ವಿಶೇಷ.

<><><>

ಬೆಳಕಿನ ಹಬ್ಬ ದೀಪಾವಳಿ, ಭವಿಷ್ಯ ಬೆಳಗುವ ಹಬ್ಬವಾಗಲಿ; ಹಸಿರು ಪಟಾಕಿಗಳನ್ನು ಮಾತ್ರವೇ ಬಳಸಿ, ಪಟಾಕಿ ಸಿಡಿಸುವಾಗ ಜಾಗರೂಕತೆ, ಪರಿಸರ ಸ್ನೇಹಿ ಹಬ್ಬಕ್ಕೆ ಆದ್ಯತೆ ಇರಲಿ ಎಂದು, ರಾಜ್ಯ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ, ನಾಡಿನ ಜನತೆಯಲ್ಲಿ ಮನವಿ ಮಾಡಿದೆ. ಸುರಕ್ಷತೆಯ ಕನ್ನಡಕ ಕಡ್ಡಾಯ ಬಳಕೆ, ಪಟಾಕಿ ಸಿಡಿದು ಸುಟ್ಟ ಗಾಯ ಉಂಟಾದಲ್ಲಿ, ತಕ್ಷಣ ನೀರಿನಿಂದ ತೊಳೆದು, ಕಿಡಿ ಕಣ್ಣಿಗೆ ಬಿದ್ದರೆ ಉಜ್ಜಿಕೊಳ್ಳದೇ, ಮನೆಮದ್ದಿಗೆ ಒತ್ತು ನೀಡಿ, ಅಮೂಲ್ಯ ಸಮಯ ವ್ಯರ್ಥ ಮಾಡದೇ, ಸಮೀಪದ ಆಸ್ಪತ್ರೆಗೆ ಧಾವಿಸಿ, ತಜ್ಞ ವೈದ್ಯರಿಂದ ಚಿಕಿತ್ಸೆ ಪಡೆಯುವಂತೆ, ಧಾರವಾಡದ ಎಂ.ಎಂ. ಜೋಶಿ ನೇತ್ರಾಲಯದ ಹಿರಿಯ ನೇತ್ರ ತಜ್ಞ, ಡಾಕ್ಟರ್ ಸತ್ಯಮೂರ್ತಿ, ಆಕಾಶವಾಣಿ ಮೂಲಕ ಹೆಚ್ಚಿನ ಮಾಹಿತಿ ನೀಡಿದ್ದಾರೆ.

<><><>

ಡಾ. ಸತ್ಯಮೂರ್ತಿ ಧ್ವನಿ 45 ಸೆಕೆಂದುಗಳು

<><><>

ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..

<><><>

ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಅನುದಾನದಡಿ, ಒಟ್ಟು 9 ಸಾವಿರದ 715 ಸ್ವ ಸಹಾಯ ಗುಂಪುಗಳನ್ನು ಸಂಘಟಿಸಿ, 8 ಸಾವಿರದ 8 ನೂರಾ 89 ಮಹಿಳೆಯರನ್ನು, ಆರ್ಥಿಕವಾಗಿ ಸುದೃಢ ಗೊಳಿಸಲಾಗಿದೆ ಎಂದು, ಬೀದರ ಜಿಲ್ಲಾ ಪಂಚಾಯ್ತಿ ಸಿ.ಇ.ಓ. ಗಿರೀಶ ಬದೋಲೆ ತಿಳಿಸಿದ್ದಾರೆ. ಕೇಂದ್ರ ನೀತಿ ಆಯೋಗ ಸಂಚಾಲಿತ, ಸಂಪೂರ್ಣತಾ ಅಭಿಯಾನದ, ಮಹತ್ವಾಕಾಂಕ್ಷಿ ತಾಲೂಕುಗಳಾದ ಔರಾದ (ಬಿ), ಕಮಲನಗರ, ಹುಮನಾಬಾದ, ಹಾಗೂ ಚಿಟಗುಪ್ಪಾ, 6 ಮಾನದಂಡಗಳ ಸಾಧನೆಯ ಸಮಾರೋಪ ಕಾರ್ಯಕ್ರಮದಲ್ಲಿ, ಅವರು ಮಾತನಾಡಿದರು. ಜಿಲ್ಲೆಯಲ್ಲಿ ಈ ವರೆಗೆ 2 ಸಾವಿರದ 500 ಕಿರು ಹಾಗೂ ಮಧ್ಯಮ ಗಾತ್ರದ ಉದ್ದಿಮೆಗಳನ್ನು ಪ್ರಾರಂಭಿಸಲು, ಪ್ರೋತ್ಸಾಹಿಸಲಾಗಿದೆ. 546 ಗುಂಪುಗಳಿಗೆ 8 ಕೋಟಿ 96 ಲಕ್ಷ ರೂಪಾಯಿ ಬಿಡುಗಡೆಯಾಗಿದೆ. 216 ಗುಂಪುಗಳಿಗೆ 43 ಲಕ್ಷ ಸುತ್ತು ನಿಧಿ ಮಂಜೂರಾಗಿದೆ ಎಂದು ಹೇಳಿದರು.

<><><>

ಬೀದರ ಜಿಲ್ಲಾ ಉಸ್ತುವಾರಿ ಸಚಿವ ಈಶ್ವರ ಖಂಡ್ರೆ, ವೈದ್ಯಕೀಯ ಶಿಕ್ಷಣ ಹಾಗೂ ಕೌಶಲಾಭಿವೃದ್ಧಿ ಖಾತೆ ಸಚಿವ, ಶರಣಪ್ರಕಾಶ ಪಾಟೀಲ, ಪೌರಾಡಳಿತ ಖಾತೆ ಸಚಿವ ರಹೀಂ ಖಾನ್, ಶಾಸಕ ಶೈಲೇಂದ್ರ ಬೆಲ್ದಾಳೆ ಪಾಲ್ಗೊಂಡು, ಫಲಾನುಭವಿಗಳಿಗೆ ಚೆಕ್ ಹಸ್ತಾಂತರಿಸಿದರು.

<><><>

ಕಲಬುರಗಿ ಜಿಲ್ಲೆಯ ಧಾರ್ಮಿಕ, ಐತಿಹಾಸಿಕ ಹಾಗೂ ಪ್ರವಾಸಿ ತಾಣಗಳಲ್ಲಿ, ಮೂಲ ಸೌಕರ್ಯ ಅಭಿವೃದ್ಧಿ ಪಡಿಸಿ, ಪ್ರವಾಸೋದ್ಯಮಕ್ಕೆ ಉತ್ತೇಜನ ನೀಡಲು, ಯೋಜಿತ ಪ್ರಯತ್ನ ಮಾಡಲಾಗುತ್ತಿದೆ ಎಂದು, ಕಲಬುರಗಿ ಜಿಲ್ಲಾ ಉಸ್ತುವಾರಿ ಸಚಿವ ಪ್ರಿಯಾಂಕ್ ಖರ್ಗೆ ತಿಳಿಸಿದ್ದಾರೆ. ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ, ಚಿಂಚೋಳಿ ವನ್ಯಜೀವಿ ಅಭಯಾರಣ್ಯ ಮತ್ತು ಚಂದ್ರಂಪಳ್ಳಿ ಪ್ರಕೃತಿ ಚಾರಣಕ್ಕೆ ಚಾಲನೆ ನೀಡಿ ಅವರು, ಮಾತನಾಡಿದರು. ಜಿಲ್ಲೆಯ ಸನ್ನತ್ತಿ, ನಾಗಾವಿ, ಚಿಂಚೋಳಿ, ದೇವಲ ಗಾಣಗಾಪೂರಗಳನ್ನು, ಮುಂದಿನ ಒಂದೂವರೆ ವರ್ಷದಲ್ಲಿ, 52 ಕೋಟಿ ರೂಪಾಯಿ ವೆಚ್ಚದಲ್ಲಿ, ಅಭಿವೃದ್ಧಿ ಪಡಿಸಲಾಗುವುದು ಎಂದು, ಪ್ರಿಯಾಂಕ್ ಖರ್ಗೆ ನುಡಿದರು.

<><><>

ಸ್ವಾತಂತ್ರ್ಯ ಹೋರಾಟಗಾರ, ಗುಡ್ಡೆಮನೆ ಅಪ್ಪಯ್ಯ ಗೌಡರ ಕುರಿತು ಮತ್ತು ಅಮರ ಸುಳ್ಯ ದಂಗೆಯ ಹೋರಾಟಗಾರರ ವಿಷಯವನ್ನು, ಪಠ್ಯ ಪುಸ್ತಕದಲ್ಲಿ ಮರು ಸೇರ್ಪಡೆ ಬಗ್ಗೆ, ಮುಖ್ಯಮಂತ್ರಿ ಅವರೊಡನೆ ಚರ್ಚಿಸುವುದಾಗಿ, ವಿರಾಜಪೇಟೆ ಶಾಸಕ ಎ.ಎಸ್.ಪೊನ್ನಣ್ಣ ತಿಳಿಸಿದ್ದಾರೆ. ಮಡಿಕೇರಿ ಕೋಟೆ ಆವರಣದಲ್ಲಿ ಏರ್ಪಡಿಲಾಗಿದ್ದ, ಸ್ವಾತಂತ್ರ್ಯ ಹೋರಾಟಗಾರ ಸುಬೇದಾರ್ ಗುಡ್ಡೆಮನೆ ಅಪ್ಪಯ್ಯಗೌಡರ ಸಂಸ್ಮರಣಾ ಕಾರ್ಯಕ್ರಮದಲ್ಲಿ, ಪುಷ್ಪ ನಮನ ಸಲ್ಲಿಸಿ, ಅವರು ಮಾತನಾಡಿದರು.

<><><>

ರಾಜ್ಯದ ಏಳು ಜನ ಸೇರಿದಂತೆ, ದೇಶದ 463 ಭದ್ರತಾ ಅಧಿಕಾರಿಗಳಿಗೆ, ಕೇಂದ್ರೀಯ ಗೃಹ ಮಂತ್ರಿ ದಕ್ಷತಾ ಪದಕ ಪ್ರಕಟಿಸಲಾಗಿದೆ. ವಿಧಿ ವಿಜ್ಞಾನ ಪ್ರಯೋಗಾಲಯದ ಉಪ ನಿರ್ದೇಶಕ ಡಾಕ್ಟರ್ ಪ್ರವೀಣ್ ಯು., ಉಪ ಪೊಲೀಸ್ ವರಿಷ್ಠಾಧಿಕಾರಿ ಬಸವರಾಜ ಕೆ., ಬೆಂಗಳೂರು ನಗರ ಸಹಾಯಕ ಪೊಲೀಸ್ ಆಯುಕ್ತ ರಮೇಶ ವಿ.ಎಲ್., ವೃತ್ತ ನಿರೀಕ್ಷಕರುಗಳಾದ ಉಮೇಶ ಕಾಂಬ್ಳೆ, ನರೇಂದ್ರ ಬಾಬು, ವಸಂತ ಕೆ.ಎಂ., ರಮೇಶ ಹನಾಪುರ ಕೇಂದ್ರ ಗೃಹ ಮಂತ್ರಿಗಳ ದಕ್ಷತಾ ಪುರಸ್ಕಾರಕ್ಕೆ ಆಯ್ಕೆಯಾಗಿದ್ದಾರೆ.

<><><>

ಭದ್ರಾವತಿ ಆಕಾಶವಾಣಿ ಕೇಂದ್ರದ ವಜ್ರ ಮಹೋತ್ಸವ ವರ್ಷಾಚರಣೆ ಹಾಗೂ ಕನ್ನಡ ರಾಜ್ಯೋತ್ಸವ ಸಂಭ್ರಮದ ಹಿನ್ನೆಲೆ, ಇಂದು ಬೆಳಗ್ಗೆ 10 ಗಂಟೆಯಿಂದ 11.30ರ ವರೆಗೆ, ವಿಶೇಷ ಕಾರ್ಯಕ್ರಮ, ಪ್ರಸಾರವಾಗಲಿದೆ. ಕವನ ವಾಚನ ಮತ್ತು ಗಾಯನ ಕಾರ್ಯಕ್ರಮದಲ್ಲಿ, ಶಿವಮೊಗ್ಗ ಜಿಲ್ಲೆಯ ಆಯ್ದ ಕವಿಗಳು, ಕವನ ವಾಚನ ಮಾಡಲಿದ್ದು, ರಾಗ ಸಂಯೋಜಿಸಿ ಹಾಡಲಾಗುತ್ತಿದೆ.

<><><>

ಈಗ ಸಂಕ್ಷಿಪ್ತ ಸುದ್ದಿಗಳು:

<><><>

ಭಾರತದ ಉಕ್ಕಿನ ಮನುಷ್ಯ, ಸರ್ದಾರ್ ವಲ್ಲಭ ಭಾಯ್ ಪಟೇಲ್ ಜನ್ಮ ದಿನದ ಅಂಗವಾಗಿ, ಮುಖ್ಯಮಂತ್ರಿ ಸಿದ್ದರಾಮಯ್ಯ, ವಿಧಾನಸೌಧದ ಸಮ್ಮೇಳನ ಸಭಾಂಗಣದಲ್ಲಿ, 'ರಾಷ್ಟ್ರೀಯ ಏಕತಾ ದಿವಸ್' ಅಂಗವಾಗಿ, ಅಧಿಕಾರಿಗಳಿಗೆ ಪ್ರತಿಜ್ಞಾ ವಿಧಿ ಬೋಧಿಸಿದರು.

<><><>

ಚಿಕ್ಕಬಳ್ಳಾಪುರದ, ಜೈನ್ ಮಿಷನ್ ಆಸ್ಪತ್ರೆಯಲ್ಲಿ, ಉಚಿತ ಡಯಾಲಿಸಿಸ್ ಸೌಲಭ್ಯವನ್ನು, ಇಂದಿನಿಂದ ಒದಗಿಸಲಾಗುವುದು ಎಂದು, ಅಧ್ಯಕ್ಷ ನರಪತ್ ಸೋಲಂಕಿ ತಿಳಿಸಿದ್ದಾರೆ.

<><><>

ಗೃಹ ಖಾತೆ ಸಚಿವ ಜಿ.ಪರಮೇಶ್ವರ್ ಅವರು, ಹಾಸನಾಂಬಾ ದೇವಿ ದರ್ಶನ ಪಡೆದರು.

<><><>

ಕರ್ನಾಟಕ ಕಾನೂನು ಆಯೋಗದ ಅಧ್ಯಕ್ಷರಾಗಿ, ನ್ಯಾಯಮೂರ್ತಿ ಅಶೋಕ ಹಿಂಚಗೇರಿ, ಅಧಿಕಾರ ಸ್ವೀಕರಿಸಿದ್ದಾರೆ.

<><><>

ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಮಿಷನ್ ಅಡಿ, ದೀಪ ಸಂಜೀವಿನಿ ಕಾರ್ಯಕ್ರಮಕ್ಕೆ ಬಾಗಲಕೋಟೆ ಜಿಲ್ಲಾಧಿಕಾರಿ ಕೆ.ಎಂ. ಜಾನಕಿ ಚಾಲನೆ ನೀಡಿದರು.

<><><>

ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:

<><><>

- 'ಹೆಸರಾಯಿತು ಕರ್ನಾಟಕ; ಉಸಿರಾಗಲಿ ಕನ್ನಡ' ಧ್ಯೇಯದೊಂದಿಗೆ, ಇಂದು ಸಂಭ್ರಮದ, ಕನ್ನಡ ನಾಡ ಹಬ್ಬ.
- ದೀಪಾವಳಿ ಲಕ್ಷ್ಮೀ ಪೂಜೆ ಹಾಗೂ ಬಲಿ ಪಾಡ್ಯಮಿ ಹಿನ್ನೆಲೆ, ನಾಡಿನಾದ್ಯಂತ ಶ್ರದ್ಧಾ, ಭಕ್ತಿಯಿಂದ ಹಬ್ಬದಾಚರಣೆ.
- ಸಂಪೂರ್ಣತಾ ಅಭಿಯಾನ; ಬೀದರ ಜಿಲ್ಲೆಯ ನಾಲ್ಕು ಮಹತ್ವಾಕಾಂಕ್ಷಿ ತಾಲೂಕುಗಳಲ್ಲಿ, ಯಶಸ್ವಿ.
- ಕಲಬುರಗಿಯ ಧಾರ್ಮಿಕ, ಐತಿಹಾಸಿಕ ಹಾಗೂ ಪ್ರವಾಸಿ ತಾಣಗಳ, ಮೂಲಸೌಕರ್ಯ ಅಭಿವೃದ್ಧಿಗೆ ಕ್ರಮ – ಪ್ರಿಯಾಂಕ್ ಖರ್ಗೆ.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

<><><>

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಈ ಬೆಳಗ್ಗೆ 7 ಗಂಟೆ 35 ನಿಮಿಷಕ್ಕೆ.

<><><>

ಹರ್ಷ